# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ
# UNIVERSITY OF HORTICULTURAL SCIENCES, BAGALKOT

**ದಿನಾಂಕ 14–12–2017 ರಂದು ಬೆಳಿಗ್ಗೆ 11:00 ಗಂಟೆಗೆ ಕೊಠಡಿ ಸಂ. 253, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇಲ್ಲಿ ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 42ನೇ ಸಭೆಯ ನಡುವಳಿಗಳು**

## MINUTES OF 42nd MEETING OF THE BOARD OF MANAGEMENT HELD ON 14-12-2017 AT 11:00 AM IN ROOM No. 253, M. S. BUILDING, BENGALURU

**ಹಾಜರಾದ ಸದಸ್ಯರು**

**MEMBERS PRESENT**

| | | | |
|---|---|---|---|
| 1. | **ಡಾ. ಡಿ. ಎಲ್. ಮಹೇಶ್ವರ್**<br>ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ<br>ತೋವಿವಿ, ಬಾಗಲಕೋಟ. | : | ಅಧ್ಯಕ್ಷರು |
| | **Dr. D. L. Maheswar**<br>Vice-Chancellor and Chairman<br>Board of Management,UHS, Bagalkot. | | Chairman |
| 2. | **ಶ್ರೀ ಎಂ. ಮಹೇಶ್ವರ್ ರಾವ್, ಭಾಆಸೇ**<br>ಸರ್ಕಾರದ ಕಾರ್ಯದರ್ಶಿಗಳು, ಬೆಂಗಳೂರು ಹಾಗೂ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೋಟಗಾರಿಕೆ ಇಲಾಖೆ, ಎಂ. ಎಸ್. ಬಿಲ್ಡಿಂಗ್, ಬೆಂಗಳೂರು–560001. | : | ಸದಸ್ಯರು |
| | **Sri. M. Maheshwar Rao, IAS**<br>Secretary to GOK and Member,<br>Board of Management, UHS Bagalkot,<br>Dept. of Horticulture, M.S.Building,<br>Bengaluru-560001. | | Member |
| 3. | **ಶ್ರೀಮತಿ ಪದ್ಮಾವತಿ**<br>ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಪ್ರತಿನಿಧಿಗಳು ಮತ್ತು<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೋಟಗಾರಿಕೆ ಇಲಾಖೆ, ವಿಧಾನ ಸೌಧ, ಬೆಂಗಳೂರು–560001. | : | ಸದಸ್ಯರು |
| | **Mrs. Padmavathi**<br>Additional Secretary to GOK, Dept. of Finance<br>Representative of Principal Secretary GOK and<br>Member, Board of Management, UHS, Bagalkot,<br>Department of Finance, Vidhan Soudha,<br>Bengaluru-560001. | | Member |
| 4. | **ಡಾ. ಎಸ್. ನಂದಾ**<br>**ತೋಟಗಾರಿಕೆ ಜಂಟಿ ನಿರ್ದೇಶಕರು (ಯೋಜನೆ)**<br>ತೋಟಗಾರಿಕೆ ಆಯುಕ್ತರು, ಬೆಂಗಳೂರು ಇವರ ಪ್ರತಿನಿಧಿಗಳು ಮತ್ತು<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು–560004. | : | ಸದಸ್ಯರು |
| | **Dr. S. Nanda**<br>Joint Director of Horticulture (Planning)<br>Representative of Commissioner of Horticulture<br>and Member, Board of Management, UHS<br>Bagalkot,Dept. of Horticulture, Lalbagh,<br>Bangalore 560004. | | Member |

| | | | |
|---|---|---|---|
| 5. | **ಶ್ರೀ ಬಸವರಾಜ ನೀಲಪ್ಪ ಶಿವಣ್ಣನವರ**<br>ಶಾಸಕರು, ಬ್ಯಾಡಗಿ ಮತಕ್ಷೇತ್ರ ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂಗಮೇಶ್ವರ ನಗರ, 6ನೇ ಕ್ರಾಸ್, ಗುಮ್ಮನಹಳ್ಳಿ ರಸ್ತೆ, ಬ್ಯಾಡಗಿ,<br>ಹಾವೇರಿ ಜಿಲ್ಲೆ–5861106. | : | ಸದಸ್ಯರು |
| | **Sri Basavaraj Neelappa Shivannavar**<br>Member of Legislative Assembly and Member<br>Board of Management, UHS, Bagalkot<br>Byadgi Legislative Constituency<br>Sangmeshwar Nagar, 6th Cross<br>Gummanahalli Road, Byadgi<br>Haveri District-581 106. | | Member |
| 6. | **ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ**<br>ಶಾಸಕರು, ರೋಣ ಮತಕ್ಷೇತ್ರ, ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ನಂ. 1110, ಗೌಡರ ಓಣಿ, ಬಸವ ನಗರ, ರೋಣ, ಗದಗ ಜಿಲ್ಲೆ. | : | ಸದಸ್ಯರು |
| | **Sri Gurupadgouda Sanganagouda Patil**<br>Member of Legislative Assembly and Member<br>Board of Management, UHS, Bagalkot.<br>Ron Legislative Constituency<br>No. 1110, Goudra Oni, Basava Nagar,<br>Ron, Gadag District. | | Member |
| 7. | **ಶ್ರೀ ಆರ್. ಚೌಡರೆಡ್ಡಿ, ತೂಪಲ್ಲಿ**<br>ವಿಧಾನ ಪರಿಷತ್ ಸದಸ್ಯರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೂಪಲ್ಲಿ ಗ್ರಾಮ, ಜೆ. ತಿಮ್ಮಸಚಿದ್ರ ಪೋಸ್ಟ್<br>ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ. | : | ಸದಸ್ಯರು |
| | **Sri R. Chowda Reddy Thoopalli**<br>Member of Legislative Council and Member<br>Board of Management, UHS, Bagalkot<br>Tupalli Village, J. Timmasandra Post<br>Srinivaspur Taluka, Kolar District. | | Member |
| 8. | **ಶ್ರೀ ಶಂಕರಪ್ಪ ಬಸಪ್ಪ ಮಳಲಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಮು:ಪೋ: ಉತ್ತೂರು, ತಾ: ಮುಧೋಳ, ಜಿ: ಬಾಗಲಕೋಟ | : | ಸದಸ್ಯರು |
| | **Sri Shankarappa Basappa Malali**<br>Member, Board of Management, UHS, Bagalkot<br>Mu:Po: Utturu, Mudhol Taluka, Dist: Bagalkot | | Member |
| 9. | **ಶ್ರೀ ಎಸ್. ಎನ್. ಮಂಜುನಾಥಗೌಡ**<br>ಸದಸ್ಯರು, ವ್ಯವಸ್ಥಾಪನಾ ಮಂಡಳ, ತೋವಿವಿ, ಬಾಗಲಕೋಟ<br>ಶೆಟ್ಟಿಮಾದಮಂಗಲ ಗ್ರಾಮ, ವೆಲಗಲಬುರ್ರೆ (ಅಂಚೆ), ವಯಾ ದಳಸನೂರು,<br>ಮದನಹಳ್ಳ ಪಂಚಾಯಿತಿ–563126, ತಾಲ್ಲೂಕು ಮತ್ತು ಜಲ್ಲೆ: ಕೋಲಾರ | : | ಸದಸ್ಯರು |
| | **Sri S. N. Manjunathagowda**<br>Member, Board of Management,<br>UHS, Bagalkot<br>Shettymadamangala Village,<br>Velagalaburre Post, Via Dalasanur, Madanahally<br>Panchayath-563126,<br>Tq & Dist : Kolar | | Member |

| | | | |
|---|---|---|---|
| 10. | **ಶ್ರೀ ಆರ್. ಎಂ. ನಾಗೇಶ**<br>ಸದಸ್ಯರು, ವ್ಯವಸ್ಥಾಪನಾ ಮಂಡಳ, ತೋವಿವಿ, ಬಾಗಲಕೋಟ<br>ನಂ. 25, ಜುಬಿಲಿ ಶಾಲೆ ಹತ್ತಿರ,<br>ಪಾಪರೆಡ್ಡಿಪಾಳ್ಯ, ನಾಗರಬಾವಿ,<br>ಬೆಂಗಳೂರು-560 072. | : | ಸದಸ್ಯರು |
| | **Sri. R. M. Nagesh**<br>Member, Board of Management, UHS Bagalkot<br>No. 25, Near Jubilee School,<br>Papareddypalya, Nagarbhavi,<br>Bengaluru-560 072. | : | Member |
| 11. | **ಶ್ರೀ ಯೋಗಿರಾಜ ಬಿ. ಪಾಟೀಲ**<br>ಸದಸ್ಯರು, ವ್ಯವಸ್ಥಾಪನಾ ಮಂಡಳ, ತೋವಿವಿ, ಬಾಗಲಕೋಟ<br>ಸಂ. 142, "ಸದ್ಗುರು",<br>5ನೇ ಕ್ರಾಸ್, ಕುಸುಮನಗರ ಮುಖ್ಯ ರಸ್ತೆ<br>ವೈದ್ಯ ಮಠ ಸಂಕೀರ್ಣ ಹಿಂದುಗಡೆ<br>ಧಾರವಾಡ-580008. | : | ಸದಸ್ಯರು |
| | **Dr. Yogiraj B. Patil**<br>Member, Board of Management, UHS Bagalkot<br>No. 142, "Sadguru"<br>5th Cross, Kusumnagar Main Road<br>Backside of Vaidya Math Complex<br>Dharwad-580008. | | Member |
| 12. | **ಶ್ರೀಮತಿ ಕಸ್ತೂರಿ ತವನಪ್ಪ ಅಷ್ಟಗಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳ, ತೋವಿವಿ, ಬಾಗಲಕೋಟ<br>ಮಾರ್ಕೆಟ್ ರಸ್ತೆ, ಮಾರುತಿ ಗುಡಿ ಹಿಂಡುಗಡೆ<br>ಮು:ಪೋ: ಉಪ್ಪಿನ ಬೆಟಗೇರಿ<br>ತಾ:ಜಿ: ಧಾರವಾಡ-581206. | : | ಸದಸ್ಯರು |
| | **Smt. Kasturi Tavanappa Astagi**<br>Member, Board of Management, UHS Bagalkot<br>Market Road<br>Behind Maruti Temple<br>At Post: Uppin Betageri<br>Tq:Dist.: Dharwad-581206. | | Member |
| 13. | **ಡಾ. ಹೆಚ್. ಬಿ. ಲಿಂಗಯ್ಯ**<br>ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ,<br>ಬಾಗಲಕೋಟ. | : | ಸದಸ್ಯರು |
| | **Dr. H. B. Lingaiah**<br>Director of Education and Member<br>Board of Management,<br>UHS, Bagalkot | | Member |
| 14. | **ಡಾ. ಕೆ. ಎಂ. ಇಂದಿರೇಶ್**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ,<br>ಬಾಗಲಕೋಟ. | : | ಸದಸ್ಯ ಕಾರ್ಯದರ್ಶಿಗಳು |
| | **Dr. K. M. Indiresh**<br>Registrar & Member-Secretary,<br>Board of Management,<br>Univeristiy of Horticultural Sciences,<br>Bagalkot. | | Member Secretary |

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ ಇವರು ಸಭೆಗೆ ಹಾಜರಾದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ಗೌರವಾನ್ವಿತ ಕುಲಪತಿಗಳು ಮತ್ತು ಅಧ್ಯಕ್ಷರಾದ ಡಾ. ಡಿ. ಎಲ್. ಮಹೇಶ್ವರ್ ಇವರು ಕೂಡ ವ್ಯವಸ್ಥಾಪನಾ ಮಂಡಳಿಯ 42ನೇ ಸಭೆಗೆ ಸದಸ್ಯರುಗಳನ್ನು ಸ್ವಾಗತಿಸಿದರು. ಕುಲಸಚಿವರು ಗೌರವಾನ್ವಿತ ಕುಲಪತಿಗಳು ಹಾಗೂ ಅಧ್ಯಕ್ಷರು ಇವರಿಗೆ ಸಭೆಯನ್ನು ಕೈಗೊಂಡು ಕಾರ್ಯಸೂಚಿಗಳನ್ವಯ ಚರ್ಚೆಗಳನ್ನು ಕೈಗೊಳ್ಳಲು ವಿನಂತಿಸಿದರು. ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳ ಮೇಲೆ ಸುದೀರ್ಘ ಚರ್ಚೆಗಳನ್ನು ಕೈಗೆತ್ತಿಕೊಂಡು ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

At the outset, the Registrar and Member Secretary welcomed members of the Board of Management to the meeting. Hon'ble Vice Chancellor and Chairman also welcomed all the members of Board of Management of UHS, Bagalkot for the 42nd Meeting of Board of Management. The Registrar requested the Hon'ble Vice Chancellor and Chairman to chair the meeting and to conduct the deliberations as per the agenda for discussion. After the detailed deliberations on the agenda subjects, the following decisions were resolved during the Board meeting.

| | |
|---|---|
| **ಕಾರ್ಯಸೂಚಿ ಸಂ.01** | **ದಿನಾಂಕ 01.08.2017 ರಂದು ಜರುಗಿದ 41ನೇ ವ್ಯವಸ್ಥಾಪನಾ ಮಂಡಳಿಯ ಸಭೆಯ ನಡುವಳಿಗಳ ಧೃಢೀಕರಣ.** |
| | **ಚರ್ಚೆ ಮತ್ತು ಠರಾವು :**<br>41ನೇ ವ್ಯವಸ್ಥಾಪನಾ ಮಂಡಳಿ ಸಭೆಯ ನಡುವಳಿಗಳ ಮೇಲೆ ನಿಗದಿಪಡಿಸಿದ ದಿನಾಂಕದೊಳಗೆ ಯಾವುದೇ ಸದಸ್ಯರಿಂದ ಸಲಹೆಗಳು/ಟಿಪ್ಪಣಿಗಳು ಸ್ವೀಕೃತವಾಗದ ಕಾರಣ, ಸಭೆಯ ನಡುವಳಿಗಳನ್ನು ಅಳವಡಿಸಿಕೊಳ್ಳಲು ದೃಢೀಕರಿಸಲಾಯಿತು. |
| **Item No.01** | **Confirmation of the minutes of the 41st meeting of the Board of Management held on 01.08.2017.** |
| | **Discussion and Resolution :**<br>As there were no comments received from any of the members within the stipulated date, the minutes of the 41st meeting of Board of Management were confirmed for adoption. |
| **ಕಾರ್ಯಸೂಚಿ ಸಂ.02** | **ದಿನಾಂಕ 01.08.2017 ರಂದು ಜರುಗಿದ 41ನೇ ವ್ಯವಸ್ಥಾಪನ ಮಂಡಳಿ ಸಭೆಯ ನಡುವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ದಿನಾಂಕ 01.08.2017 ರಂದು ನಡೆದ 41ನೇ ವ್ಯವಸ್ಥಾಪನಾ ಮಂಡಳಿಯ ಸಭೆಯ ನಿರ್ಧಾರ / ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮಗಳ ವರದಿಯನ್ನು ಸಭೆಗೆ ಮಂಡಿಸಲಾಯಿತು. ಸುಧೀರ್ಘ ಚರ್ಚೆಯ ನಂತರ, ಮಂಡಳಿಯು ಈ ಕೆಳಗಿನ ಸಲಹೆಗಳೊಂದಿಗೆ, ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳ ವರದಿಗೆ ತನ್ನ ಅನುಮೋದನೆಯನ್ನು ನೀಡಿತು.<br>**ಟೇಬಲ್ ಕಾರ್ಯಸೂಚಿ ಸಂ. 02:** ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿದ ಸಿಎಎಸ್–2006 ರ ಅಡಿಯಲ್ಲಿಯ ಶಿಕ್ಷಕರುಗಳ ಪದೋನ್ನತಿಗೆ ಸಂಬಂಧಿಸಿದಂತೆ, ಭಾರತ ಸರಕಾರದ ರಾಜ್ಯಪತ್ರದಲ್ಲಿ |

| | |
|---|---|
| | ದಿನಾಂಕ 18.09.2010 ರಂದು ಪ್ರಕಟಗೊಂಡ ಯುಜಿಸಿ ಪತ್ರ ಸಂ. ಎಫ್.3–1/2009 ದಿನಾಂಕ 30.06.2010 ರ ಅನುಸಾರ ನಿರ್ಣಯವನ್ನು ಮರುಪರಿಶೀಲಿಸುವಂತೆ ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br>**(ಕ್ರಮ: ಕುಲಸಚಿವರು)** |
| **Item No.02** | **Action taken report on the minutes of the 41st meeting of Board of Management held on 01.08.2017.** |
| | **Discussion and Resolution :**<br>The action taken report on the minutes of the 41st meeting of Board of Management held on 01.08.2017 were placed before the Board, the Board after detailed deliberations accorded its approval to the action taken report with the following suggestions:<br><br>**Table Agenda Item No. 02:** Regarding the promotion of teachers under CAS 2006 approved by the Board, the Board directed the University to re-examine the decision as per the UGC letter No.F-3-1/2009 dated 30.06.2010 and published in Gazette on 18.09.2010.<br>**(Action: Registrar)** |
| **ಕಾರ್ಯಸೂಚಿ ಸಂ.03** | **"ತೋಟಗಾರಿಕೆಯಲ್ಲಿ ಕೌಶಲ್ಯೋದ್ಯಮ–ಪ್ರಗತಿಯ ಪ್ರಣಾಳಿಕೆ" ಎಂಬ ಶೀರ್ಷಿಕೆ ಅಡಿಯಲ್ಲಿ 2017 ರ ಡಿಸೆಂಬರ್ ಮಾಹೆಯಲ್ಲಿ ತೋಟಗಾರಿಕೆ ಮೇಳವನ್ನು ಆಯೋಜಿಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br><br>ಗೌರವಾನ್ವಿತ ಅಧ್ಯಕ್ಷರು ವಿಶ್ವವಿದ್ಯಾಲಯದ ವಿಸ್ತರಣಾ ಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದರು. ಸುದೀರ್ಘ ಚರ್ಚೆಯ ನಂತರ, ಮಂಡಳಿಯು ಕಾರ್ಯಸೂಚಿಯಲ್ಲಿ ಮಂಡಿಸಿದಂತೆ ರೂ. 100 ಲಕ್ಷಗಳ ಅನುದಾನ ಅವಕಾಶಗಳ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿತು. ಮಂಡಳಿಯು "ತೋಟಗಾರಿಕೆಯಲ್ಲಿ ಕೌಶಲ್ಯೋದ್ಯಮ–ಪ್ರಗತಿಯ ಪ್ರಣಾಳಿಕೆ" ಎಂಬ ಶೀರ್ಷಿಕೆ ಅಡಿಯಲ್ಲಿ ರೈತರಿಗೆ ಬೇಕಾಗುವ ತಾಂತ್ರಿಕತೆಗಳು ಮತ್ತು ಅವಶ್ಯಕತೆಗಳನ್ನು ಒಂದೇ ಸೂರಿನಡಿಯಲ್ಲಿ ಪ್ರದರ್ಶಿಸಲು ನಿರ್ದೇಶನ ನೀಡಿತು.<br><br>**(ಕ್ರಮ: ವಿಸ್ತರಣಾ ನಿರ್ದೇಶಕರು)** |

| | |
|---|---|
| **Item No.03** | **Approval for organizing Horticulture Fair-2017 with a theme “Skillful Entrepreneurship in Horticulture – Manifesto for the Future” during december-2017.** |
| | **Discussion and Resolution :**<br>Hon’ble Chairman explained about the extension activities of the University in brief. After the detailed discussion, the Board approved the proposal as put up in agenda with budget provision of Rs. 100 lakhs. The Board directed the University to showcase all the technologies and all requirements of the farmers at a single platform with a theme of “Skillful Entrepreneurship in Horticulture – Manifesto for the Future”.<br>**(Action: Director of Extension)** |
| **ಕಾರ್ಯಸೂಚಿ ಸಂ.04** | **ಶ್ರೀ ಸಚಿನ ಬಿ. ಎಸ್., ನ್ಯಾಯವಾದಿಗಳು ಇವರ ಹೆಸರನ್ನು ವಿಶ್ವವಿದ್ಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ಅಳವಡಿಸಿಕೊಳ್ಳಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು:**<br>ವಿವಿಧ ನ್ಯಾಯಾಲಯಗಳಲ್ಲಿ ವಿಶ್ವವಿದ್ಯಾಲಯದ ಪ್ರಕರಣಗಳಿಗೆ ಸಂಬಂಧಿಸಿದಂತೆ ವಾದ ಮಂಡಿಸಲು ಶ್ರೀ ಸಚಿನ ಬಿ. ಎಸ್., ನ್ಯಾಯವಾದಿಗಳು ಇವರ ಹೆಸರನ್ನು ವಿಶ್ವವಿದ್ಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ಸೇರಿಸುವ ಪ್ರಸ್ತಾವನೆಯನ್ನು ಮಂಡಳಿಯು ಪರಿಶೀಲಿಸಿತು. ಮುಂದಿನ ಎರಡು ವರ್ಷಗಳ ಅವಧಿಗೆ ಸದರಿಯವರ ಹೆಸರನ್ನು ವಿಶ್ವವಿದ್ಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ಮತ್ತು ಸದರಿಯವರ ಕಾರ್ಯಕ್ಷಮತೆ ಆಧಾರದ ಮೇಲೆ ಅವಧಿಯನ್ನು ನವೀಕರಿಸಲು ಮಂಡಳಿಯು ತನ್ನ ಅನುಮೋದನೆಯನ್ನು ನೀಡಿತು.<br>(**ಕ್ರಮ : ಆಡಳಿತಾಧಿಕಾರಿಗಳು**) |
| **Item No.04** | **Approval for inclusion of name of Sri Sachin B. S., Advocate in the University Advocates Panel.** |
| | **Discussion & Resolution :**<br>Board perused the proposal for inclusion of name of Sri Sachin B.S., advocate for pleading University cases in various courts. The Board approved for inclusion his name in panel of advocates for period for next two years and renew further based on the performance.<br>**(Action : Administrative Officer)** |

| | |
|---|---|
| **ಕಾರ್ಯಸೂಚಿ ಸಂ.05** | **ತೋವಿವಿ, ಬಾಗಲಕೋಟದ ಅಧೀನದಲ್ಲಿ ಖಾಸಗಿ ಸಂಸ್ಥೆಗಳ ಸಂಯೋಜನೆ ಮಾಡುವ ಸಲುವಾಗಿ ಪರಿಶೀಲನೆಗಾಗಿ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br>ಸುದೀರ್ಘ ಚರ್ಚೆಯ ನಂತರ, ಮಂಡಳಿಯು ಈ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮುಂದೂಡಿತು.<br>**(ಕ್ರಮ : ಕುಲಸಚಿವರು)** |
| **Item No.05** | **Approval for constitution of Local Inquiry Committee to inspect private institutions for affiliation under UHS, Bagalkot.** |
| | **Discussion & Resolution :**<br>After detailed deliberations, this item was deferred to the next meeting of Board of Management.<br>**(Action : Registrar)** |
| **ಕಾರ್ಯಸೂಚಿ ಸಂ.06** | **ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳ ಸಭಾ ಭತ್ಯೆ, ರಸ್ತೆ ಮೈಲೇಜು ದರ ಮತ್ತು ದಿನಭತ್ಯೆಗಳನ್ನು ಹೆಚ್ಚಿಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯು ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಿಗೆ ಸಭಾ ಭತ್ಯೆ, ರಸ್ತೆ ಮೈಲೇಜು ದರ ಮತ್ತು ದಿನಭತ್ಯೆಗಳನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿತು. ಸದರಿ ವಿಷಯವನ್ನು ಮಂಡಳಿಯು ದೀರ್ಘವಾಗಿ ಚರ್ಚಿಸಿತು ಮತ್ತು ಸಭಾ ಭತ್ಯೆಯನ್ನು ರೂ. 1,000/- ರಿಂದ ರೂ. 3,000/- ರವರೆಗೆ ಹೆಚ್ಚಿಸಲು ತನ್ನ ಅನುಮೋದನೆ ನೀಡಿತು. ಮುಂದುವರೆದು, ರಸ್ತೆ ಮೈಲೇಜು ದರ ಮತ್ತು ದಿನಭತ್ಯೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಹೊರಡಿಸಿದ ಸಂಬಂಧಿತ ಆದೇಶಗಳನ್ನು ಪಾಲಿಸುವಂತೆ ಮಂಡಳಿಯು ಸಲಹೆ ನೀಡಿತು.<br>**(ಕ್ರಮ : ಕುಲಸಚಿವರು)** |
| **Item No.06** | **Approval for enhancement of sitting fees, road mileage and daily allowances for members of BOM, UHS, Bagalkot.** |
| | **Discussion & Resolution :**<br>The Board examined the proposal for enhancement of sitting fees, road mileage and daily allowances for members of BOM, UHS, Bagalkot. The Board discussed the subject at length and accorded its approval for enhancement of sitting fee from Rs. 1,000/- to Rs. 3,000/-. Further, with respect to road mileage and daily allowances Board suggested to follow the relevant orders issued by the GOK in this regard.<br>**(Action : Registrar)** |

| | |
|---|---|
| ಕಾರ್ಯಸೂಚಿ ಸಂ.07 & 08 | **ಶ್ರೀ ರವಿ ಎಸ್. ಬಾಳಿಕಾಯಿ ಮತ್ತು ಶ್ರೀ ಗುರುನಾಥ ಜಾಂತಿಕರ, ವಿಶ್ವವಿದ್ಯಾಲಯದ ನ್ಯಾಯವಾದಿಗಳು ಇವರುಗಳ ಸೇವೆಯನ್ನು ವಿಸ್ತರಿಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br>ಸದರಿ ನ್ಯಾಯವಾದಿಗಳು ನಿರ್ವಹಿಸುತ್ತಿರುವ ಪ್ರಕರಣಗಳು ಮತ್ತು ಅವರ ಕಾರ್ಯಕ್ಷಮತೆಯನ್ನು ಪರಿಗಣಿಸಿ, ಮಂಡಳಿಯು ವಿಶ್ವವಿದ್ಯಾಲಯದ ನ್ಯಾಯವಾದಿಗಳ ಪಟ್ಟಿಯಲ್ಲಿ ಸದರಿಯವರನ್ನು ಎರಡು ವರ್ಷಗಳ ಅವಧಿಗೆ ಸೇವೆಯನ್ನು ವಿಸ್ತರಿಸಲು ತನ್ನ ಅನುಮೋದನೆ ನೀಡಿತು.<br>**(ಕ್ರಮ : ಆಡಳಿತಾಧಿಕಾರಿಗಳು)** |
| **Item No. 07 & 08** | **Approval for extending the services of Shri Ravi. Balikai and Shri Gurunatha Jantikar, University Advocates.** |
| | **Discussion & Resolution :**<br>Considering the cases being handled and performance of these advocates, the Board accorded its approval for extending the service for the period of two years on panel of University advocates.<br>**(Action : Administrative Officer)** |
| ಕಾರ್ಯಸೂಚಿ ಸಂ.09 | **ಶ್ರೀ. ಬಸವರಾಜ ಎಸ್. ಮಲ್ಲಿಗವಾಡ, ಸಹಾಯಕ ಆಡಳಿತಾಧಿಕಾರಿಗಳು/ ಸಹಾಯಕ ಕುಲಸಚಿವರು ಇವರನ್ನು ತೋವಿವಿ, ಬಾಗಲಕೋಟದಿಂದ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿಗೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆ.** |
| | **ಚರ್ಚೆ ಮತ್ತು ಠರಾವು :**<br>ತೋವಿವಿ, ಬಾಗಲಕೋಟದ ಅಧಿನಿಯಮ 2009/ಪರಿನಿಯಮಗಳಲ್ಲಿ ಅಂತರ ವಿಶ್ವವಿದ್ಯಾಲಯ ವರ್ಗಾವಣೆಗೆ ಅವಕಾಶವಿಲ್ಲದ ಪ್ರಯುಕ್ತ ಸದರಿ ಕಾರ್ಯಸೂಚಿಯನ್ನು ವ್ಯವಸ್ಥಾಪನಾ ಮಂಡಳಿಯು ಪರಿಗಣಿಸಿರುವುದಿಲ್ಲ.<br>**(ಕ್ರಮ : ಆಡಳಿತಾಧಿಕಾರಿಗಳು)** |
| **Item No.09** | **Inter-university transfer of Sri. Basavaraj S. Malligawad, Assistant Administrative Officer/Assistant Registrar, UHS, Bagalkot to Karnataka University, Dharwad.** |
| | **Discussion & Resolution :**<br>This item was not considered by the Board, as there are no provisions in UHS Act, 2009/Statutes for such inter-university transfer.<br>**(Action : Administrative Officer)** |

| | |
|---|---|
| **ಕಾರ್ಯಸೂಚಿ ಸಂ.10** | **ತೋಟಗಾರಿಕೆ ಅಭಿಯಾಂತ್ರಿಕ ಹಾಗೂ ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸುರಿಗೆ ಸರ್ಕಾರದಿಂದ ಮಂಜೂರಾದ ಸಹಾಯಕ ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರು ಹುದ್ದೆಗಳ ಶೈಕ್ಷಣಿಕ ವಿದ್ಯಾರ್ಹತೆಗಳ ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br>ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರು(ಹಾವೇರಿ)ಗೆ ಸರ್ಕಾರದಿಂದ ಮಂಜೂರಾದ ಸಹಾಯಕ ಪ್ರಾಧ್ಯಾಪಕ ಮತ್ತು ಸಹ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಶೈಕ್ಷಣಿಕ ವಿದ್ಯಾರ್ಹತೆಗಳ ಅವಶ್ಯಕತೆಯನ್ನು ಪರಿಗಣಿಸಿ, ಮಂಡಳಿಯು ಕಾರ್ಯಸೂಚಿಯಲ್ಲಿ ಮಂಡಿಸಿದಂತೆ ಸಹಾಯಕ ಪ್ರಾಧ್ಯಾಪಕ ಮತ್ತು ಸಹ ಪ್ರಾಧ್ಯಾಪಕ ಹುದ್ದೆಗಳ ಶೈಕ್ಷಣಿಕ ವಿದ್ಯಾರ್ಹತೆಗಳಿಗೆ ತನ್ನ ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು)** |
| **Item No.10** | **Approval of educational qualifications for the posts of Assistant Professor and Associate Professor sanctioned by the Government to the College of Horticulture Engineering and Food Technology, Devihosur (Haveri).** |
| | **Discussion & Resolution :**<br>Considering the essentiality of educational qualification for filling-up of the post of Assistant Professor and Associate Professor sanctioned by the Government to the College of Horticulture Engineering and Food Technology, Devihosur (Haveri), the Board approved the educational qualification for the post of Assistant Professor and Associate Professor as put up in the agenda.<br>**(Action: Registrar)** |
| **ಕಾರ್ಯಸೂಚಿ ಸಂ.11** | **ದಿವಂಗತ ಡಾ॥ ವಿಜಯಕುಮಾರ ಚನ್ನಪ್ಪ ಕನ್ಮಡಿ ಇವರ ಹೆಸರಿನಲ್ಲಿ ಚಿನ್ನದ ಪದಕವನ್ನು ಪ್ರಾರಂಭಿಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯು ದಿನಾಂಕ 09.05.2017 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಭೆಯ ಶಿಫಾರಸ್ಸುಗಳನ್ವಯ ಚಿನ್ನದ ಪದಕ ವಿತರಣೆ ವಿವರಗಳನ್ನು ಪರಿಶೀಲಿಸಿತು. ಮಂಡಳಿಯು ತೋವಿವಿ, ಬಾಗಲಕೋಟದ ಚಿನ್ನದ ಪದಕ ನಿಯಮಗಳ ಪ್ರಕಾರ ದಿವಂಗತ ಡಾ॥ ವಿಜಯಕುಮಾರ ಚನ್ನಪ್ಪ ಕನ್ಮಡಿ ಇವರ ಹೆಸರಿನಲ್ಲಿ ಚಿನ್ನದ ಪದಕವನ್ನು ಪ್ರಾರಂಭಿಸಲು ಮತ್ತು ಸದರಿ ಪದಕವನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ಎಂ. ಎಸ್ಸಿ. (ತೋಟಗಾರಿಕೆ) ಹಣ್ಣು ವಿಜ್ಞಾನ ವಿಭಾಗ ಹೆಚ್ಚು ಓಜಿಪಿಎ ಪಡೆದ ವಿದ್ಯಾರ್ಥಿಗೆ 7ನೇ ಘಟಿಕೋತ್ಸವದಿಂದ ನೀಡಲು ತನ್ನ ಅನುಮೋದನೆಯನ್ನು ನೀಡಿತು. ಮುಂದುವರೆದು, |

| | |
|---|---|
| | ಮಂಡಳಿಯು ಚಿನ್ನದ ಪದಕಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುವ ಬದಲಾಗಿ ಅವಶ್ಯಕ ಮೊತ್ತವನ್ನು ಠೇವಣಿ ಇಡುವ ಮೂಲಕ ಬರುವ ಬಡ್ಡಿ ಹಣದಿಂದ ಶಿಷ್ಯವೇತನ/ವಿದ್ಯಾರ್ಥಿವೇತನ ಪ್ರಾರಂಭಿಸುವುದರಿಂದ ಕನಿಷ್ಠ ತೋವಿವಿ, ಬಾಗಲಕೋಟದ ವಿವಿಧ ಪದವಿಗಳ ಮೆರಿಟ್ ವಿದ್ಯಾರ್ಥಿವೇತನಕ್ಕೆ ಸಮಾನವಾದ ಶಿಷ್ಯವೇತನ/ವಿದ್ಯಾರ್ಥಿವೇತನವನ್ನು ಪ್ರಶಂಸನೀಯ/ಅವಶ್ಯವಿರುವ ವಿದ್ಯಾರ್ಥಿಗಳಿಗೆ ಪ್ರಧಾನ ಮಾಡಲು ಸಹಕಾರಿಯಾಗಲಿದೆ ಎಂದು ದಾನಿಗಳಿಗೆ ತಿಳಿಸಲು ಸಲಹೆ ನೀಡಿತು.<br><br>**(ಕ್ರಮ : ಕುಲಸಚಿವರು)** |
| **Item No.11** | **Approval for institution of gold medal in the name of "Late Dr. Vijayakumar Channappa Kanamadi".** |
| | **Discussion & Resolution :**<br><br>The Board went through the details of award of Gold Medal as per the recommendation of the Academic Council in its meeting held on 09.05.2017. The Board accorded its approval for instituting the Gold Medal in the name of **"Late Dr. Vijayakumar Channappa Kanamadi"** and to be awarded to the student who have secured the highest OGPA in M.Sc. (Hort.) in Fruit Science discipline at University level every year as per UHS Gold Medal rules starting from 7$^{th}$ Convocation of UHS, Bagalkot. Further, Board suggested the University not to encourage institution of Gold Medals, instead convince the donors to extend the fellowship/scholarships by depositing required amount sufficient to generate interest so that meritorious/needy student is extended the fellowship/scholarships equivalent to at least UHS merit scholarship of respective degrees.<br><br>**(Action: Registrar)** |
| **ಕಾರ್ಯಸೂಚಿ ಸಂ.12** | **2016-17ನೇ ಸಾಲಿನ ರಾಜ್ಯದ ವಿಶ್ವವಿದ್ಯಾಲಯಗಳ ಶ್ರೇಯಾಂಕ ಪ್ರಕ್ರೀಯೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ಗೆ ರೂ. 2.00 ಲಕ್ಷಗಳನ್ನು ಪಾವತಿಸಲು ಅನುಮತಿ.** |
| | **ಚರ್ಚೆ ಮತ್ತು ಠರಾವು :**<br><br>ಸುದೀರ್ಘ ಚರ್ಚೆಯ ನಂತರ, ಮಂಡಳಿಯು ರೂ. 2.00 ಲಕ್ಷಗಳನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರಿಗೆ "Executive Director, Karnataka State Higher |

| | |
|---|---|
| | Education Council" ಇವರ ಹೆಸರಿನಲ್ಲಿ ಡಿಡಿ ಮೂಲಕ ಅಥವಾ ಆರ್‌ಟಿಜಿಎಸ್ ಮೂಲಕ ಬೆಂಗಳೂರಿನಲ್ಲಿ ಪಾವತಿಯಾಗುವಂತೆ ರೂ. 2 ಲಕ್ಷಗಳನ್ನು ಪಾವತಿಸಲು ತನ್ನ ಒಪ್ಪಿಗೆ ನೀಡಿತು.<br><br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)** |
| **Item No.12** | **Permission to remit an amount of Rs. 2.00 lakh to Karnataka State Higher Education Council for processing the Rating of Universities for the year 2016-17.** |
| | **Discussion & Resolution :**<br>After detailed deliberations, the Board permitted the University to remit Rs. 2.00 lakhs to Karnataka State Higher Education Council, Bengaluru either by Demand Draft drawn in favour of "Executive Director, Karnataka State Higher Education Council" payable at Bengaluru or through RTGS.<br>**(Action: Comptroller)** |
| **ಕಾರ್ಯಸೂಚಿ ಸಂ.13** | **ಡಿಪ್ಲೋಮಾ (ತೋಟಗಾರಿಕೆ) ಕೋರ್ಸಿನ ಸಂಯೋಜಕರಿಗೆ ಮಾಸಿಕ ಗೌರವಧನ ನೀಡುವುದು.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯು ದಿನಾಂಕ 09.05.2017 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸುಗಳನ್ನು ಪರಿಶೀಲಿಸಿತು ಮತ್ತು ಎರಡು ವರ್ಷದ ಡಿಪ್ಲೋಮಾ (ತೋಟಗಾರಿಕೆ) ಕೋರ್ಸಿನ ಸಂಯೋಜಕರು ಹೆಚ್ಚುವರಿಯಾಗಿ ಜವಾಬ್ದಾರಿಗಳನ್ನು ನಿರ್ವಹಿಸುವುದರಿಂದ ಪ್ರತಿ ತಿಂಗಳು ರೂ. 500/– ಗಳ ಗೌರವಧನವನ್ನು ಪಾವತಿಸಲು ತನ್ನ ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು)** |
| **Item No.13** | **Approval for monthly remuneration to the Co-ordinator of Diploma (Hort.) Course.** |
| | **Discussion & Resolution :**<br>The Board perused the recommendations of the Academic Council meeting held on 09.05.2017 and accorded its approval for payment of Rs. 500/- per month as honorarium the Co-ordinators of two years Diploma (Hort.) Course for carrying out the additional responsibilities.<br><br>**(Action: Registrar)** |

| ADDITIONAL AGENDA | |
|---|---|
| **ಕಾರ್ಯಸೂಚಿ ಸಂ.01** | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ವಿವಿಧ ವಿಭಾಗಗಳಿಗೆ ವೈಜ್ಞಾನಿಕ ಉಪಕರಣಗಳನ್ನು ಖರೀದಿಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br><br>ಮಂಡಳಿಯು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವಿವಿಧ ಯೋಜನೆಗಳ ಅಡಿಯಲ್ಲಿ ವೈಜ್ಞಾನಿಕ ಉಪಕರಣಗಳಾದ 1) Robust Marker Assay System, 2) Honey Testing Laboratory Kit with System and 3) AAS (Atomic Absorption Spectrometer) ಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿತು. ಸುದೀರ್ಘ ಚರ್ಚೆಯ ನಂತರ ಮತ್ತು ವೈಜ್ಞಾನಿಕ ಉಪಕರಣಗಳ ಖರೀದಿಯ ಅವಶ್ಯಕತೆಯನ್ನು ಪರಿಗಣಿಸಿ, ಮಂಡಳಿಯು ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿತು ಮತ್ತು ತೋವಿವಿ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಾವಳಿಗಳ ಅನುಸಾರ ಟೆಂಡರ್ ಕರೆಯಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br><br>**(ಕ್ರಮ : ಆಸ್ತಿ ಅಧಿಕಾರಿಗಳು)** |
| **Item No.01** | **Approval for procurement of scientific equipments for the various campuses of the University.** |
| | **Discussion & Resolution :**<br>The Board examined the proposal for procurement of scientific equipments viz., 1) Robust Marker Assay System, 2) Honey Testing Laboratory Kit with System and 3) AAS (Atomic Absorption Spectrometer) under various projects at UHS Bagalkot. After detailed deliberations and considering the essentiality to procure the scientific equipments, the Board accorded its approval for proposal and directed the University to invite the tenders as per norms of UHS and KTPP Act.<br><br>**(Action: Estate Officer)** |
| **ಕಾರ್ಯಸೂಚಿ ಸಂ.02** | **ತೋ.ವಿ.ವಿ. ಬಾಗಲಕೋಟದ 7ನೇ ಘಟಿಕೋತ್ಸವದ ಅತಿಥಿಗಳ ಪಟ್ಟಿ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಸದಸ್ಯ ಕಾರ್ಯದರ್ಶಿಗಳು ದಿನಾಂಕ 25.01.2018 ರಂದು ಹಮ್ಮಿಕೊಳ್ಳಲು ಉದ್ದೇಶಿಸಲಾದ 7ನೇ ಘಟಿಕೋತ್ಸವ ಕಾರ್ಯಕ್ರಮದ ಮುಖ್ಯ ಅತಿಥಿಗಳ ಪಟ್ಟಿಯನ್ನು ಸಭೆಗೆ ವಿವರಿಸಿದರು. ಮಂಡಳಿಯು ಪಟ್ಟಿಯಲ್ಲಿರುವ ಮುಖ್ಯ ಅತಿಥಿಗಳ ವಿವರಗಳನ್ನು ತಿಳಿದುಕೊಳ್ಳಲು ಬಯಸಿತು. ಸದಸ್ಯ |

<table>
<tr><td></td><td>ಕಾರ್ಯದಶಿಗಳಿಂದ ಮಾಹಿತಿಯನ್ನು ಪಡೆದುಕೊಂಡ ನಂತರ, ಮಂಡಳಿಯ ಮುಖ್ಯ ಅತಿಥಿಗಳ ಪಟ್ಟಿಗೆ ಈ ಕೆಳಗಿನಂತೆ ಅನುಕ್ರಮವಾಗಿ ತನ್ನ ಅನುಮೋದನೆ ನೀಡಿತು:<br><br>1) ಡಾ. ಎಸ್ ಕೆ ಪಟ್ಟನಾಯಕ, ಭಾಆಸೇ, ಕಾರ್ಯದರ್ಶಿಗಳು, ಭಾರತ ಸರ್ಕಾರ, ಕೃಷಿ ಹಾಗೂ ರೈತ ಕಲ್ಯಾಣ ಮಂತ್ರಾಲಯ, ಕೃಷಿ ಭವನ, ನವದೆಹಲಿ.<br>2) ಡಾ. ತ್ರಿಲೋಚನ ಮೊಹಪಾತ್ರ, ಕಾರ್ಯದರ್ಶಿಗಳು, ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ ಮತ್ತು ಮಹಾನಿರ್ದೇಶಕರು, ಭಾರತೀಯ ಕೃಷಿ ಅನುಸಂದಾನ ಪರಿಷತ್, ನವದೆಹಲಿ.<br>3) ಡಾ. ಅಲೂರ ಸೀಲಿನ ಕಿರಣ ಕುಮಾರ, ಕಾರ್ಯದರ್ಶಿಗಳು, ಬಾಹ್ಯಾಕಾಶ ವಿಭಾಗ, ಮತ್ತು ಅಧ್ಯಕ್ಷರು ಇಸ್ರೋ, ಬೆಂಗಳೂರು.<br>4) ಡಾ. ಹರೀಶ ಕುಮಾರ ಭನ್ವಾಲಾ, ಅಧ್ಯಕ್ಷರು, ಕೃಷಿ ಮತ್ತು ಗ್ರಾಮೀಣ ಅಭಿವೃದ್ದಿ ರಾಷ್ಟ್ರೀಯ ಬ್ಯಾಂಕ್ (ನಬಾರ್ಡ) ಮುಂಬೈ, ಮಹಾರಾಷ್ಟ್ರ.<br><br>ಮುಂದುವರೆದು, ಮಂಡಳಿಯು ದಿನಾಂಕ 25.01.2017 ರಂದು ಜರುಗಲಿರುವ ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವದ ಮುಖ್ಯ ಅತಿಥಿಗಳ ಪಟ್ಟಿಯಲ್ಲಿ ಈ ಕೆಳಗಿನ ಇಬ್ಬರು ಸದಸ್ಯರುಗಳ ಹೆಸರುಗಳನ್ನು ಅನುಕ್ರಮ ಸಂ. 5 ಮತ್ತು 6 ರ ಅಡಿಯಲ್ಲಿ ಸೇರಿಸಿಕೊಳ್ಳಲು ಸಲಹೆ ನೀಡಿತು.<br><br>5) ಡಾ. ಆರ್. ಎ. ಮಾಶೆಳಕರ, ವಿಶ್ರಾಂತ ನಿರ್ದೇಶಕ ಜನರಲ್, ವೈಜ್ಞಾನಿ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರ, ನವದೆಹಲಿ.<br>6) ಡಾ. ಸುಧಾ ಮೂರ್ತಿ, ಅಧ್ಯಕ್ಷರು, ಇನ್ಫೋಸಿಸ್ ಫೌಂಡೇಶನ್, ನೆರಳು #1/2 (1878), 11ನೇ ಮುಖ್ಯ, 39ನೇ ಕ್ರಾಸ್, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು–560 001.<br><br>ಮಂಡಳಿಯು ನಡುವಳಿಗಳ ದೃಢೀಕರಣಕ್ಕೆ ಕಾಯದೆ ಮುಖ್ಯ ಅತಿಥಿಗಳ ಪಟ್ಟಿಯನ್ನು ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಕಳುಹಿಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br><br>(ಕ್ರಮ : ಕುಲಸಚಿವರು)</td></tr>
<tr><td>Item No.02</td><td>Panel of Chief Guests for 7th Convocation of UHS, Bagalkot.</td></tr>
<tr><td></td><td>Discussion & Resolution :<br>The Member Secretary presented the panel of Chief Guests for the Seventh Convocation to be held on tentatively 25th January, 2018 and Board desires to know about the credentials of the Chief Guests enlisted in the panel. After getting the information from the Member Secretary, the Board approved the panel of Chief Guests in the order as under ;<br><br>1) Dr. S K Pattanayak, IAS, Secretary, Government of India, Ministry of Agriculture and Farmers Welfare, Krishi Bhavan, New Dehli.</td></tr>
</table>

| | |
|---|---|
| | 2) **Dr. Trilochan Mohapatra,** Secretary, Department of Agricultural Research and Education (DARE) & Director General (ICAR), Krishi Bhavan, New Delhi.<br>3) **Dr, Alur Seelin Kiran Kumar,** Secretary, Department of Space and Chairman, ISRO, Bengaluru.<br>4) **Dr. Harish Kumar Bhanwala**, Chairman, National Bank for Agriculture and Rural Development (NABARD), Mumbai, Maharashtra.<br>Further, the Board suggested the University to include the following two members in the panel of Chief Guests for $7^{th}$ Convocation of UHS Bagalkot to be held on $25^{th}$ January 2018 under Sl.No.5 and 6.<br>5) **Dr. R. A. Mashelkar,** Former Director General, Council of Scientific & Industrial Research, Ministry of Science & Technology, Govt. of India, New Delhi.<br>6) **Dr. Sudha Murthy,** Chairman, Infosys Foundation, Neralu, #1/2 (1878), $11^{th}$ Main, $39^{th}$ Cross, $4^{th}$ T Block, Jayanagar, Bengaluru-560 001.<br>The Board directed the University to send panel of Chief Guests to Hon'ble Governor for the kind approval without waiting for confirmation of the minutes.<br>**(Action: Registrar)** |
| **ಕಾರ್ಯಸೂಚಿ ಸಂ.03** | **ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯಕ್ಕೆ ಸಂಬಂಧಿಸಿದಂತೆ, ಸಹಾಯಕ ಪ್ರಾಧ್ಯಾಪಕ ಮತ್ತು ಸಹ ಪ್ರಾಧ್ಯಾಪಕರ ನೇಮಕಾತಿಗಾಗಿ ಅಂಕಪಟ್ಟಿ (ಸ್ಕೋರ್‌ಕಾರ್ಡ್) ನಿರ್ಧರಿಸುವ ಬಗ್ಗೆ.** |
| | **ಚರ್ಚೆ ಮತ್ತು ಠರಾವು :**<br>ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರು(ಹಾವೇರಿ)ಗೆ ಸರ್ಕಾರದಿಂದ ಮಂಜೂರಾದ ಸಹಾಯಕ ಪ್ರಾಧ್ಯಾಪಕ ಮತ್ತು ಸಹ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಸ್ಕೋರ್ ಕಾರ್ಡ್ ಅವಶ್ಯಕತೆಯನ್ನು ಪರಿಗಣಿಸಿ, ಮಂಡಳಿಯು ಕಾರ್ಯಸೂಚಿಯಲ್ಲಿ ಮಂಡಿಸಿದಂತೆ ಸಹಾಯಕ ಪ್ರಾಧ್ಯಾಪಕ ಮತ್ತು ಸಹ ಪ್ರಾಧ್ಯಾಪಕ ಹುದ್ದೆಗಳ ಸ್ಕೋರ್ ಕಾರ್ಡ್‌ಗೆ ಮತ್ತು ಅದರ ವಿವರಗಳಿಗೆ ತನ್ನ ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು)** |

| | |
|---|---|
| **Item No.03** | **Proposed score card for Assistant Professor and Associate Professor for College of Horticulture Engineering and Food Technology, Devihosur (Haveri).** |
| | **Discussion & Resolution :**<br>Considering the recommendations of the Academic Council and essentiality of Score Card for filling-up of the post of Assistant Professor and Associate Professor sanctioned by the Government to the Horticulture Engineering and Food Technology, Devihosur (Haveri), the Board approved the Score Card and its details for the post of Assistant Professor and Associate Professor as put up in the agenda.<br>**(Action: Registrar)** |
| **TABLE AGENDA** | |
| **ಕಾರ್ಯಸೂಚಿ ಸಂ.01** | **ದಿನಾಂಕ 13.12.2017 ರಂದು ಜರುಗಿದ 17ನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ವ್ಯವಸ್ಥಾಪನಾ ಮಂಡಳಿಯು ದಿನಾಂಕ 13.12.2017 ರಂದು ಜರುಗಿದ 17ನೇ ಹಣಕಾಸು ಸಮಿತಿಯ ಸಭೆಯ ನಡುವಳಿಗಳನ್ನು ಪರಿಶೀಲಿಸಿತು ಮತ್ತು ಸದರಿ ನಡುವಳಿಗಳಿಗೆ ತನ್ನ ಅನುಮೋದನೆ ನೀಡಿತು. ಮಂಡಳಿಯು ಕಾರ್ಯ ಸೂಚಿಗಳ ಮೇಲೆ ಸೂಕ್ತ ಕ್ರಮ ಜರಗಿಸುವಂತೆ ಸೂಚಿಸಿತು.<br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)** |
| **Item No. 01** | **Approval of proceedings of the 17th meeting of finance committee of UHS, Bagalkot held on 13.12.2017 – reg.** |
| | **Discussion & Resolution :**<br>The Board discussed the subject at length and accorded its approval for the proceedings of the 17th meeting of Finance Committee held on 13.12.2017. The Board suggested to take necessary action on these items.<br>**(Action: Comptroller)** |

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳವರಿಂದ ವಂದಾನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

The meeting was concluded with the vote of thanks Registrar and the Member secretary.

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,**
**ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ**
**Registrar & Member-Secretary**
**Board of Management, UHS, Bagalkot**